**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 29.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎ ಎಫ್ ಆರ್ ವಕೀಲರಿಂದಃ**

ಸದರಿ ಕೇಸನ್ನು ಯಾವ ಕಾರಣಕ್ಕೆ ಹಾಕಿದ್ದೀರಿ ಎಂದರೆ ಸಾಕ್ಷಿ ನಾನು ಗಾಡಿ ಓಡಿಸುವ ಸಮಯದಲ್ಲಿ ಅಪಘಾತವಾಗಿತ್ತು ಆ ಕಾರಣಕ್ಕೆ ಹಾಕಿದ್ದೇನೆ ಎನ್ನುತ್ತಾರೆ. ಸದರಿ ಕೇಸನ್ನು ಯಾರ ಮೇಲೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ನನ್ನ ದೊಡ್ಡಮ್ಮ ಕೇಸ್ ಮಾಡಿದ್ದು ನನಗೆ ಅವರು ಯಾರ ಮೇಲೆ ಕೇಸ್ ಸಲ್ಲಿಸಿದ್ದಾರೆಂದು ಗೊತ್ತಿಲ್ಲ ಎನ್ನುತ್ತಾರೆ. ನಾನು Fabricant ಕೆಲಸ ಮಾಡುತ್ತಿದ್ದೇನು. ಈಗ ಮಾಡಲು ಆಗುವುದಿಲ್ಲ. ಸದರಿ ಪ್ರಕರಣವನ್ನು ಜಹೀರಾಬೇಗಂ ಅಂದರೆ ನನ್ನ ದೊಡ್ಡಮ್ಮ ಮತ್ತು ನಾನು ಹೋಗಿ ದಾಖಲಿಸಿರುತ್ತೇವೆ. ಸದರಿ ಪ್ರಕರಣದಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಅಪಘಾತ ಯಾವ ತಾರೀಕಿನಂದು ಆಗಿದೆ ಎಂದರೆ ಸಾಕ್ಷಿ 2022 ನೇ ಸಾಲಿನಲ್ಲಿ 1 ನೇ ತಾರೀಕಿನಂದು ಆಗಿದೆ ತಿಂಗಳು ಯಾವುದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಅಪಘಾತ ಸುಮಾರು ರಾತ್ರಿ 8.30 ರಿಂದ 9.00 ಗಂಟೆಯ ಅವಧಿಯಲ್ಲಿ ನಡೆದಿರುತ್ತದೆ. ಅಪಘಾತದ ನಂತರ ನನ್ನನ್ನು ಕೆ ಎಂ ಸಿ ಗೆ ಕರೆದುಕೊಂಡು ಹೋದರು. ಕೆಎಂಸಿಯಲ್ಲಿ ಸುಮಾರು 19 ರಿಂದ 20 ದಿನಗಳವರೆಗೆ ನಾನು ಚಿಕಿತ್ಸೆ ಪಡೆದಿರುತ್ತೇನೆ. ನನ್ನ ವಾಹನದ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ನನ್ನ ವಾಹನ ಸುಜೂಕಿ ಕಂಪನಿಯದು ಆಗಿರುತ್ತದೆ. ಅಪಘಾತವಾದ ಸಮಯದಲ್ಲಿ ನನಗೆ ಚಾಲನಾ ಪರವಾನಿಗೆ ಇರಲಿಲ್ಲ. ನನ್ನ ವಾಹನಕ್ಕೆ ವಿಮೆ ಇತ್ತು. ನನ್ನ ವಾಹನದ ವಿಮೆಯನ್ನು

ನ್ಯಾಯಾಲಯಕ್ಕೆ ನಾನು ಹಾಜರಪಡಿಸಿದ್ದೇನೆ. ಎದುರುದಾರರು ನಮ್ಮ ಕೇಸಿಗೆ ಏನು ತಕರಾರು ಸಲ್ಲಿಸಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಮ್ಮ ಪ್ರಕರಣಕ್ಕೆ ನನ್ನ ವಾಹನದ ವಿಮಾ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ನನ್ನ ವಿಮಾ ಕಂಪನಿ ಈ ಕೇಸಿನ ಅವಶ್ಯಕ ಪಕ್ಷಗಾರರರು ಎಂದರೆ ಅದು ಸರಿಯಲ್ಲ ಎನ್ನುತ್ತಾರೆ. ನಾನು ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ಕೆಎಂಸಿ ಯಲ್ಲಿ ತೋರಿಸಿದ ವೈದ್ಯರು ಸರ್ಕಾರಿ ವೈದ್ಯರು ಎಂದರೆ ಸರಿ. ನನಗೆ ಬಿ ಪಿ ಎಲ್ ಕಾರ್ಡ ಇರುವುದಿಲ್ಲ. ಕೆಎಂಸಿಯಲ್ಲಿ ಉಚಿತವಾದ ಚಿಕಿತ್ಸೆ ಅಂದರೆ ಔಷಧಿ, ಶಸ್ತ್ರ ಚಿಕಿತ್ಸೆ ಎಲ್ಲವೂ ಉಚಿತ ಎಂದರೆ ಸಾಕ್ಷಿ ನನಗೆ ಉಚಿತವಾಗಿ ಮಾಡಿಲ್ಲ ಎನ್ನುತ್ತಾರೆ. ನಾನು ನನ್ನ ಚಿಕಿತ್ಸೆಗೆ ಹಣ ನೀಡಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಕೆಎಂಸಿಗೆ ನೀಡಿದ ಹಣದ ಸಂಬಂಧ ಬಿಲ್ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇರುವುದನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಕೆಎಂಸಿ ಯಲ್ಲಿ ಉಚಿತ ಚಿಕಿತ್ಸೆ ಮಾಡಿದ್ದರೂ ಕೂಡ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ನೋಡಿದ ವೈದ್ಯರು ಅಂಗನ್ಯೂನ್ಯತಾ ಪ್ರಮಾಣಪತ್ರ ಮತ್ತು ಅದರಲ್ಲಿ ನಾನು ಎಷ್ಟು ದಿನ ಒಳರೋಗಿಯಾಗಿದ್ದೆ ಎಂಬುದನ್ನು ಬರೆದಿದ್ದಾರೆ ಎಂದರೆ ಸರಿ. ನಿಪಿ.11 ಕ್ಕೆ ಪೂರಕವಾದ ಸಲಹಾ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ. ನಿಪಿ.11 ಖೊಟ್ಟಿ ದಾಖಲೆ ಎಂದರೆ ಸರಿಯಲ್ಲ. ಈಗಲೂ ನಾನು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ ನಾನು ಅಪಘಾತಪಡಿಸಿದ್ದರಿಂದ ಆತ ಕೆಎಂಸಿಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಅದೇ ರೀತಿ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನೇ ಎದುರುದಾರನ ವಾಹನಕ್ಕೆ ಡಿಕ್ಕಿಪಡಿಸಿ ನಂತರ ಆತನ ವಿರುದ್ಧ ಸುಳ್ಳು ದೂರು

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಸುಳ್ಳು ಕೇಸ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೊಸ ಗಾಡಿ 150 ಸಿಸಿ ಗಾಡಿಯಾಗಿದ್ದು ನಾನು ಚಾಲನಾ ಪತ್ರವಿಲ್ಲದೇ ಸರಿಯಾಗಿ ಗಾಡಿಯನ್ನು ಚಾಲನೆ ಮಾಡಿಲ್ಲವಾದ ಕಾರಣ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಬಾದ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**